## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಹುದ್ದೆಗಳ ಮಂಜೂರಾತಿ.

ಓದಲಾಗಿದೆ.

1. ಸರ್ಕಾರದ ಆದೇಶ ಸಂಖ್ಯೆ: RDPR 52 GPS 2020 ಬೆಂಗಳೂರು ದಿನಾಂಕ: 07.05.2020.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 469 ಗ್ರಾಪಂಅ 2020 04.06.2020. ಹಾಗೂ 12.06.2020.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 96 ಆರ್‌ಐ 2020 ದಿನಾಂಕ: 26.06.2020.
4. ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಗ್ರಾಅಪ 96 ಆರ್‌ಐ 2020 ದಿನಾಂಕ: 26.06.2020.
5. ಸರ್ಕಾರದ ಆದೇಶ ಸಂಖ್ಯೆ: RDP 52 GPS 2020 ದಿನಾಂಕ: 26.03.2021.
6. ಆರ್ಥಿಕ ಇಲಾಖೆಯ ದಿನಾಂಕ: 07.10.2021 ರ ಟಿಪ್ಪಣಿ ಸಂಖ್ಯೆ: ಆಇ 313 ವೆಚ್ಚ 6 2021.

**ಪ್ರಸ್ತಾವನೆ:**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಡಿ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯವನ್ನು ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ, ಸ್ಥಾಪಿಸಲಾಗಿದೆ. ಸದರಿ ಆಯುಕ್ತಾಲಯಕ್ಕೆ ಮೇಲೆ (4)(5) ಮತ್ತು (6) ರಲ್ಲಿ ಓದಲಾದ ಆದೇಶಗಳಲ್ಲಿ, ಈ ಹಿಂದೆ ಆಯುಕ್ತಾಲಯದ ಸ್ಥಾಪನೆಯ ಪೂರ್ವದಲ್ಲಿ ಸಚಿವಾಲಯದ ಅಧೀನದಲ್ಲಿ ನಿರ್ವಹಿಸಲಾಗುತ್ತಿದ್ದ ಹುದ್ದೆಗಳನ್ನು ವಿವಿಧ ವಿಭಾಗಗಳಿಂದ ಆಯುಕ್ತಾಲಯಕ್ಕೆ ವರ್ಗಾಯಿಸಲಾಗಿದೆ. ಮೇಲೆ (5) ರಲ್ಲಿ ಓದಲಾದ ದಿನಾಂಕ: 26.03.2021 ರ ಆದೇಶದಲ್ಲಿ, ಸದರಿ ಹುದ್ದೆಗಳನ್ನು ಒಗ್ಗೂಡಿಸಿ, ಸ್ವ- ಉದ್ಯೋಗ ಕಾರ್ಯಕ್ರಮ ವಿಭಾಗ ಹಾಗೂ ಜೈವಿಕ ಇಂಧನ ಕಾರ್ಯಕ್ರಮಗಳ ವಿಭಾಗದ ಹುದ್ದೆಗಳನ್ನು ಮರು ಹಂಚಿಕೆ ಮಾಡಿ ಆಯುಕ್ತಾಲಯಕ್ಕೆ 84 ಹುದ್ದೆಗಳ ಸಮಗ್ರ ವೃಂದಬಲವನ್ನು ನಿರ್ದಿಷ್ಟಪಡಿಸಲಾಗಿದೆ.

84 ಹುದ್ದೆಗಳ ಪೈಕಿ SEP ಹಾಗೂ IREP ಯೋಜನೆಯಡಿ ನಿರ್ವಹಿಸಲಾಗುತ್ತಿರುವ ಹುದ್ದೆಗಳನ್ನು ರದ್ದುಗೊಳಿಸುವ ಷರತ್ತಿಗೊಳಪಟ್ಟು DRDA ಯೋಜನೆಯಡಿ ಲಭ್ಯವಾಗುವ 29 ಹುದ್ದೆಗಳನ್ನು ಆಯುಕ್ತಾಲಯಕ್ಕೆ ವರ್ಗಾಯಿಸಲು ಆರ್ಥಿಕ ಇಲಾಖೆಯು ದಿನಾಂಕ: 07.10.2021 ರ ಟಿಪ್ಪಣಿ ಸಂಖ್ಯೆ: ಆಇ 313 ವೆಚ್ಚ 6 2021 ರಲ್ಲಿ ಸಹಮತಿ ನೀಡಿದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ನಿರ್ದಿಷ್ಟಪಡಿಸಿರುವ 84 ಹುದ್ದೆಗಳ ವೃಂದಬಲವನ್ನು ನಿಗದಿಪಡಿಸಲು ನಿರ್ಧರಿಸಲಾಗಿದೆ. ಸ್ವ-ಉದ್ಯೋಗ ಕಾರ್ಯಕ್ರಮ (SEP) ಹಾಗೂ ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮ (IREP) ಯೋಜನೆಗಳು ಮುಕ್ತಾಯಗೊಂಡಿರುವುದರಿಂದ ಸದರಿ ಯೋಜನೆಗಳ ಅಡಿಯಲ್ಲಿ ಮಂಜೂರಾದ ಹುದ್ದೆಗಳನ್ನು ರದ್ದುಗೊಳಿಸಲು ತೀರ್ಮಾನಿಸಲಾಗಿದೆ.

ವಿವಿಧ ಲೆಕ್ಕ ಶೀರ್ಷಿಕೆಗಳ ನಿರ್ವಹಣೆಯ ಬದಲಾಗಿ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ವೇತನ ಮತ್ತು ಮತ್ತಿತರ ವೆಚ್ಚಗಳನ್ನು ಒಂದೇ ಲೆಕ್ಕ ಶೀರ್ಷಿಕೆಯಡಿ ನಿರ್ವಹಿಸುವಂತೆ ಅನುವಾಗಲು, ಅಸ್ತಿತ್ವದಲ್ಲಿದ್ದ SEP ಹಾಗೂ IREP ಲೆಕ್ಕ ಶೀರ್ಷಿಕೆಗಳ ಅಡಿ ಲಭ್ಯವಿರುವ ಅನುದಾನವನ್ನು ಪಂಚಾಯತ್ ರಾಜ್ ಆಯುಕ್ತಾಲಯದ ಮುಖ್ಯ ಲೆಕ್ಕ ಶೀರ್ಷಿಕೆಗೆ ವರ್ಗಾಯಿಸಲು ಸಹ ನಿರ್ಧರಿಸಲಾಗಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೆಪಿಆರ್-ಸಿಎಸ್‌ಎಂ/107/2021 ದಿನಾಂಕ:28.10.2022.**

ಮೇಲೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

1. ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ 84 ಹುದ್ದೆಗಳ ವೃಂದಬಲವನ್ನು ಅನುಬಂಧ-1 ರಲ್ಲಿರುವಂತೆ ನಿಗದಿಪಡಿಸಿ ಆದೇಶಿಸಿದೆ.

2. ಸ್ವ-ಉದ್ಯೋಗ ಕಾರ್ಯಕ್ರಮ (SEP) ಹಾಗೂ ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮ (IREP) ಯೋಜನೆಗಳು ಮುಕ್ತಾಯಗೊಂಡಿರುವುದರಿಂದ ಸದರಿ ಕಾರ್ಯಕ್ರಮಗಳ ಅಡಿ ಅನುಬಂಧ-2 ರಲ್ಲಿನ ಮಂಜೂರಾದ ಹುದ್ದೆಗಳನ್ನು ರದ್ದುಗೊಳಿಸಿ ಆದೇಶಿಸಿದೆ.
3. ಸ್ವ-ಉದ್ಯೋಗ ಕಾರ್ಯಕ್ರಮ (SEP) ಹಾಗೂ ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮ (IREP) ಯೋಜನೆಗಳು ಮುಕ್ತಾಯಗೊಂಡಿರುವುದರಿಂದ ಅವುಗಳ ಅಡಿ ನಿರ್ವಹಿಸಲಾಗುತ್ತಿರುವ ಲೆಕ್ಕ ಶೀರ್ಷಿಕೆ 2515-00-001-0-03 (SEP) ಮತ್ತು 2810-00-001-0-02 (IREP) ಗಳಲ್ಲಿ ಲಭ್ಯವಿರುವ ಅನುದಾನವನ್ನು ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಲೆಕ್ಕ ಶೀರ್ಷಿಕೆ 2515-00-001-0-01 ಪಂಚಾಯತ್ ರಾಜ್ ಆಯುಕ್ತರು-ಆಡಳಿತ ವಿಭಾಗ (ನಿರ್ದೇಶನ ಮತ್ತು ಆಡಳಿತ) ಕ್ಕೆ ಪುನರ್ ವಿನಿಯೋಗದ ಮೂಲಕ ವರ್ಗಾಯಿಸಲು ಮಂಜೂರಾತಿ ನೀಡಿದೆ.
4. ಆಯುಕ್ತಾಲಯದ 84 ಹುದ್ದೆಗಳ ವೇತನ ಹಾಗೂ ಇತರೆ ಆಡಳಿತಾತ್ಮಕ ವೆಚ್ಚವನ್ನು ಲೆಕ್ಕ ಶೀರ್ಷಿಕೆ: 2515-00-001-0-01 ಪಂಚಾಯತ್ ರಾಜ್ ಆಯುಕ್ತರು ಆಡಳಿತ ವಿಭಾಗ (ನಿರ್ದೇಶನ ಮತ್ತು ಆಡಳಿತ) ಅಡಿಯಲ್ಲಿ ಭರಿಸುವುದು.
5. ಈ ಆದೇಶವನ್ನು 2022-23 ನೇ ಸಾಲಿನಿಂದ ಜಾರಿಗೆಬರತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 313 ವೆಚ್ಚ-6 2021 ದಿನಾಂಕ: 07.10.2021 ಹಾಗೂ ದಿನಾಂಕ:13.05.2022 ರ ಟಿಪ್ಪಣಿ ಸಂಖ್ಯೆ: ಆಇ 313 ವೆಚ್ಚ 6/2021 ಗಳಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

28/10/2022

(ಎಲ್. ಕೆ. ಅತೀಕ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆಯವ್ಯಯ & ಸಂಪನ್ಮೂಲಗಳು), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರು.
4. ಎಲ್ಲಾ ನಿರ್ದೇಶಕರುಗಳು, ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರು.
5. ರಾಜ್ಯದ ಎಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.
6. ಜಂಟಿ ನಿರ್ದೇಶಕರು ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಾಹಣ ಕೇಂದ್ರ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ. ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
3. ನಿರ್ದೇಶಕರು (ಪಂ. ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಸರ್ಕಾರದ ಜಂಟಿ ಕಾರ್ಯದರ್ಶಿ (ಜಿ. ಪಂ.), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ವಿಶೇಷಾಧಿಕಾರಿ (ಜಿ.ಪಂ) ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
8. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ ಕರ್ನಾಟಕ ಪಂ. ರಾಜ್ ಆಯುಕ್ತಾಲಯ.
9. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

**ಸರ್ಕಾರಿ ಆದೇಶ ಸಂಖ್ಯೆ: ಕೆಪಿಆರ್-ಸಿಎಸ್ಎಂ/107/2021 ದಿನಾಂಕ: 28.10.2022 ಕ್ಕೆ ಅನುಬಂಧ-1**

| ಕ್ರ.ಸಂ. | ಪದನಾಮ | ವೇತನ ಶ್ರೇಣಿ (ರೂ.) | ಹುದ್ದೆಗಳ ಸಂಖ್ಯೆ | ಹುದ್ದೆಗಳು ಭರ್ತಿ ಮಾಡುವ ವಿಧಾನ |
|---|---|---|---|---|
| 1 | ಆಯುಕ್ತರು | 78800-209200 | 1 | ಭಾರತೀಯ ಆಡಳಿತ ಸೇವೆ ವೃಂದದಿಂದ |
| 2 | ನಿರ್ದೇಶಕರು-1, 2 & ಅಭಿವೃದ್ಧಿ | 82000-117700 | 3 | ನಿರ್ದೇಶಕರು ಆಡಳಿತ-1, 2, ಅಭಿವೃದ್ಧಿ ಹಾಗೂ ನಿರ್ದೇಶಕರು ಪಿಎಂಐ ವೃಂದಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಉಪ ಕಾರ್ಯದರ್ಶಿ ಆಯ್ಕೆ ಶ್ರೇಣಿ ವೃಂದಕ್ಕಿಂತ ಕಡಿಮೆ ಇಲ್ಲದ ಅಧಿಕಾರಿಯನ್ನು ನೇಮಿಸುವುದು. |
| 3 | ನಿರ್ದೇಶಕರು-ಪಿಎಂಐ | 74400-109600 | 1 | |
| 4 | ಉಪ ಕಾರ್ಯದರ್ಶಿ | 74400-109600 | 1 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಉಪ ಕಾರ್ಯದರ್ಶಿ ಹಿರಿಯ ಶ್ರೇಣಿ ವೃಂದದಿಂದ/ ಅಭಿವೃದ್ಧಿ ಆಯುಕ್ತರ ಸಿಬ್ಬಂದಿ |
| 5 | ಉಪ ನಿರ್ದೇಶಕರು | 52650-97100 | 7 | ಉಪ ನಿರ್ದೇಶಕರ ಹುದ್ದೆಗಳನ್ನು ಗ್ರಾಅಪಂ. ರಾಜ್ ಇಲಾಖೆಯ ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ/ ಸಹಾಯಕ ಕಾರ್ಯದರ್ಶಿ ಜಿ.ಪಂ. ರವರಿಂದ/ ಇತರೆ ಇಲಾಖೆಯ ಸಮನಾಂತರ ಹುದ್ದೆಗಳಿಂದ ನಿಯೋಜನೆ ಮೇಲೆ ಭರ್ತಿ ಮಾಡುವುದು. |
| 6 | ಆರ್ಥಿಕ ಅಧಿಕಾರಿ (ಹಣಕಾಸು) | 74400-109600 | 1 | ರಾಜ್ಯ ಲೆಕ್ಕ ಪತ್ರ ಇಲಾಖೆ ಅಧಿಕಾರಿಗಳಿಂದ ನಿಯೋಜನೆ ಮೇಲೆ ಭರ್ತಿ ಮಾಡುವುದು. |
| 7 | ಸಹಾಯಕ ನಿರ್ದೇಶಕರು | 43100-83900 | 2 | ಸಹಾಯಕ ನಿರ್ದೇಶಕರ ಹುದ್ದೆಗಳನ್ನು ತಾ.ಪಂ. ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ನಿರ್ದೇಶಕರು/ ಇತರೆ ಇಲಾಖೆಗಳಲ್ಲಿ ಸಮಾನಾಂತರ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳನ್ನು ನಿಯೋಜನೆ ಮೇಲೆ ಭರ್ತಿ ಮಾಡುವುದು. |

| | | | | |
|---|---|---|---|---|
| 8 | ಗೆಜೆಟೆಡ್ ಮ್ಯಾನೇಜರ್ | 40900-78200 | 4 | ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಗಳನ್ನು ಜಿ.ಪಂ., ತಾ.ಪಂ. ವ್ಯವಸ್ಥಾಪಕರ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ/ ಇತರೆ ಇಲಾಖೆಗಳಲ್ಲಿ ಸಮಾನಾಂತರ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳನ್ನು ನಿಯೋಜನೆ ಮೇಲೆ ಭರ್ತಿ ಮಾಡುವುದು. |
| 9 | ಅಧೀಕ್ಷಕರು/ ಶಿರಸ್ತೆದಾರರು/ ಸಹಾಯಕ ಸಾಂಕಿಕ ಅಧಿಕಾರಿ | 37900-70850 | 8 | ಅಧೀಕ್ಷಕರು/ ಶಿರಸ್ತೆದಾರರು/ ಸಹಾಯಕ ಸಾಂಖ್ಯಿಕ ಅಧಿಕಾರಿ ಹುದ್ದೆಗಳನ್ನು ಜಿ.ಪಂ. ತಾ.ಪಂ. ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ/ ಇತರೆ ಇಲಾಖೆಗಳಲ್ಲಿ ಸಮಾನಾಂತರ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳನ್ನು ನಿಯೋಜನೆ ಮೇಲೆ ಭರ್ತಿ ಮಾಡುವುದು. |
| 10 | ಲೆಕ್ಕ ಅಧೀಕ್ಷಕರು | 37900-70850 | 1 | ರಾಜ್ಯ ಲೆಕ್ಕ ಪತ್ರ ಇಲಾಖೆ ಅಧಿಕಾರಿಗಳಿಂದ ನಿಯೋಜನೆ ಮೇಲೆ ಭರ್ತಿ ಮಾಡುವುದು. |
| 11 | ಪ್ರಥಮ ದರ್ಜೆ ಸಹಾಯಕರು | 27650-52650 | 12 | ಜಿ. ಪಂ. ತಾ. ಪಂ. ಹಾಗೂ ಇತರೆ ಇಲಾಖೆಗಳಿಂದ ನಿಯೋಜನೆ/ ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವುದು. |
| 12 | ಶೀಘ್ರಲಿಪಿಗಾರರು | 27650-52650 | 6 | |
| 13 | ದ್ವಿತೀಯ ದರ್ಜೆ ಸಹಾಯಕರು | 21400-42000 | 9 | |
| 14 | ಬೆರಳಚ್ಚುಗಾರರು | 21400-42000 | 9 | |
| 15 | ವಾಹನ ಚಾಲಕರು | 21400-42000 | 8 | |
| 16 | ಅಟೆಂಡರ್/ ದಲಾಯತ್/ ಗ್ರೂಪ್-ಡಿ | 17000-28950 | 11 | |
| | ಒಟ್ಟು | | **84** | |

28/10/2022
(ಎಲ್. ಕೆ. ಅತೀಕ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಸರ್ಕಾರದ ಆದೇಶ ಸಂಖ್ಯೆ: ಕೆಪಿಆರ್-ಸಿಎಸ್ಎಂ/107/2021 ದಿನಾಂಕ: 28.10.2022ಕ್ಕೆ**
**ಅನುಬಂಧ -2**

## SEP ಯೋಜನೆಯಡಿ ರದ್ದುಗೊಳಿಸಲ್ಪಟ್ಟಿರುವ ಹುದ್ದೆಗಳು

| ಕ್ರ. ಸಂ. | ಪದನಾಮ | ವೇತನ ಶ್ರೇಣಿ | ಹುದ್ದೆ |
|---|---|---|---|
| 1 | ನಿರ್ದೇಶಕು (PMI) | 82000-117700 | 1 |
| 2 | ಉಪ ನಿರ್ದೇಶಕರು | 52650-97100 | 3 |
| 3 | ಸಹಾಯಕ ನಿರ್ದೇಶಕರು | 43100-83900 | 2 |
| 4 | ಸಹಾಯಕ ಸಾಂಖ್ಯಿಕ ಅಧಿಕಾರಿ | 37900-70850 | 3 |
| 5 | ಶಿರಸ್ತೇದಾರ್ | 37900-70850 | 1 |
| 6 | ಪ್ರಥಮ ದರ್ಜೆ ಸಹಾಯಕರು | 27650-52650 | 1 |
| 7 | ಶೀಘ್ರಲಿಪಿಗಾರರು | 27650-52650 | 2 |
| 8 | ದ್ವಿತೀಯ ದರ್ಜೆ ಸಹಾಯಕರು | 21400-42000 | 3 |
| 9 | ಬೆರಳಚ್ಚುಗಾರರು | 21400-42000 | 2 |
| 10 | ವಾಹನ ಚಾಲಕರು | 21400-42000 | 1 |
| 11 | ದಲಾಯತ್ | 17000-28950 | 1 |
| | **ಒಟ್ಟು** | | **20** |

## IREP ಯೋಜನೆಯಡಿ ರದ್ದುಗೊಳಿಸಲ್ಪಟ್ಟಿರುವ ಹುದ್ದೆಗಳು

| ಕ್ರ. ಸಂ. | ಪದನಾಮ | ವೇತನ ಶ್ರೇಣಿ | ಹುದ್ದೆ |
|---|---|---|---|
| 1 | ಉಪ ನಿರ್ದೇಶಕರು (ತಾಂತ್ರಿಕ) | 52650-97100 | 1 |
| 2 | ಉಪ ನಿರ್ದೇಶಕರು (ಜೈವಾನಿಲ) | 52650-97100 | 1 |
| 3 | ಅಧೀಕ್ಷಕರು | 37900-70850 | 1 |
| 4 | ಪ್ರಥಮ ದರ್ಜೆ ಸಹಾಯಕರು | 27650-52650 | 2 |
| 5 | ಶೀಘ್ರಲಿಪಿಗಾರರು | 27650-52650 | 1 |
| 6 | ಬೆರಳಚ್ಚುಗಾರರು | 21400-42000 | 1 |
| 7 | ವಾಹನ ಚಾಲಕರು | 21400-42000 | 1 |
| 8 | ದಲಾಯತ್ | 17000-28950 | 1 |
| | **ಒಟ್ಟು** | | **9** |

28/10/2022

(ಎಲ್. ಕೆ. ಅತೀಕ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.